18	ಗದಗ	06
19	ಹಾವೇರಿ	07
20	ಬಿಜಾಪುರ	07
21	ಬಾಗಲಕೋಟೆ	05
22	ಉತ್ತರ ಕನ್ನಡ	06
23	ಬಳ್ಳಾರಿ	02
24	ಬೀದರ್	04
25	ಗುಲ್ಬರ್ಗಾ	08
26	ರಾಯಚೂರು	03
27	ಕೊಪ್ಪಳ	04
	ಒಟ್ಟು	122

711 (975) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರದ ಮತ್ತು ರಾಜ್ಯದ ಕೃಷಿ ಆದಾಯ ಕಡಿಮೆಯಾಗುತ್ತಿದ್ದು, ರಾಷ್ಟ್ರದ ಜಿ.ಡಿ.ಪಿ.ಯಲ್ಲಿ ಒಂದು ಶತಾಂಶಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದರ ಬಗ್ಗೆ ಕರ್ನಾಟಕ ರಾಜ್ಯ ರೈತರಿಗಾಗಿ ಹಾಕಿಕೊಂಡ ಕಾರ್ಯಕ್ರಮಗಳೇನು ;

ಇ) ಕೇವಲ ಕಣ್ಣೊರೆಸುವ ಕಾರ್ಯಕ್ರಮಗಳಿಗಿಂತ ದೂರದೃಷ್ಟಿಯ ಕೃಷಿ ಉತ್ಪನ್ನಗಳ ಹೆಚ್ಚಳಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಬಂದಿದೆ.

ಆ) ಕೃಷಿ ಆದಾಯವನ್ನು ಹೆಚ್ಚಿಸಲು ಹಾಗೂ ರಾಷ್ಟ್ರದ ಮತ್ತು ರಾಜ್ಯದ ಜಿ.ಡಿ.ಪಿ.ಯಲ್ಲಿ ಕೃಷಿ ವಲಯದ ಪಾಲನ್ನು ಹೆಚ್ಚಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ಪ್ರಸ್ತುತ ಸಾಲಿನಲ್ಲಿ ರೈತ ಕೇಂದ್ರಿತ ಹೊಸ ಕೃಷಿ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

ಇ) ಕೃಷಿ ಉತ್ಪನ್ನಗಳ ಹೆಚ್ಚಳಕ್ಕೆ ಸರ್ಕಾರ ರೈತರಿಗೆ ಶೇ.4ರ ಬಡ್ಡಿ ದರದಲ್ಲಿ ಕೃಷಿ ಸಾ, ಶೇ.75ರ ರಿಯಾಯಿತಿಯಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬಿತ್ತನೆ ಬೀಜ. ಶೇ.50ರ ರಿಯಾಯಿತಿಯಲ್ಲಿ ಯಂತ್ರೋಪಕರಣಗಳ ವಿತರಣೆ, ಭೂ ಫಲವತ್ತತೆಯ ಮಣ್ಣು ಆರೋಗ್ಯ, ಒಪ್ಪಂದದ ಕೃಷಿ, ಜೈವಿಕ ಇಂಧನ ಕೃಷಿ, ಸಾವಯವ ಕೃಷಿ, ರಾಷ್ಟ್ರೀಯ ತೋಟಗಾರಿಕಾ ಮಿಷನ್, ಇತ್ತೀಚಿನ ವರ್ಷಗಳಲ್ಲಿ ಆವಿಷ್ಕಾರಗೊಂಡ ಕೃಷಿ ತಂತ್ರಜ್ಞಾನದ ನೆರವನ್ನು ರೈತರಿಗೆ ಒದಗಿಸಲಾಗುತ್ತಿದೆ. ವ್ಯವಸ್ಥಿತವಾದ ಮಾರುಕಟ್ಟೆಗಳ ಮೂಲಕ ಕೃಷಿ ಉತ್ಪನ್ನಗಳಿಗೆ ಉತ್ತಮ ಮೌಲ್ಯ ಒದಗಿಸುವ ಹಾಗೂ ಕಟಾವಿನ ನಂತರದ ಸಂಸ್ಕರಣೆ ವಿಧಾನಗಳಿಗಾಗಿ ಅವಶ್ಯವಿರುವ ಬಂಡವಾಳ ಸಾಲಸೌಲಭ್ಯದ ವ್ಯವಸ್ಥೆ ಮಾಡಲಾಗುತ್ತಿದೆ.

ಕೃಷಿ ಉತ್ಪನ್ನ ಹೆಚ್ಚಳಕ್ಕೆ ಬೆಳೆ ವೈವಿಧ್ಯತೆ, ಪಶುಸಂಗೋಪನೆ, ಕೋಳಿ ಸಾಕಾಣಿಕೆಯಂತಹ ಕೃಷಿ ಪೂರಕ ಕ್ಷೇತ್ರಗಳಿಗೂ ಸಹ ಆದ್ಯತೆ ನೀಡಲಾಗುತ್ತಿದೆ.

712 (976) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯಲ್ಲಿ ಈ ಹಿಂದೆ 3-4 ಕಾಯಿದೆಗಳನ್ನು ಕ್ರೋಢೀಕರಣ ಸಮಗ್ರವಾದ ಕಾಯಿದೆ ರೂಪಿಸಿದ್ದು, ಈ ಕಾಯಿದೆ ಈಗಲೂ ಚಾಲ್ತಿಯಲ್ಲಿದೆಯೇ ;

ಆ) ಕಾಯಿದೆಯಲ್ಲಿಯ ಕೆಲವು ನಿಯಮಗಳ ಜಾರಿಯ ಮೇಲೆ ರಾಜ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿರುವುದು ನಿಜವೇ ; (ವಿವರ ನೀಡುವುದು) ;

ಇ) ಅಂತಹ ನಿಯಮಗಳ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಹಿಂದಿನ ನಿಯಮಗಳು ಜಾರಿಯಲ್ಲಿರುವುದಿಲ್ಲವೇ ; (ವಿವರ ನೀಡುವುದು) ?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಧರ್ಮದಾಯ ದತ್ತಿ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆಗೆ 1.11.1956 ರಿಂದ ಜಾರಿಯಲ್ಲಿದ್ದ ಕಾಯಿದೆಗಳನ್ನು ನಿರಸನಗೊಳಿಸಿ, ದಿ: 1.5.03 ರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾಧಾಯ ದತ್ತಿಗಳ ಕಾಯಿದೆ 1997 ನ್ನು ಜಾರಿಗೆ ತರಲಾಯಿತು.